**ದಿ:12.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:-**ವಾದಿ ಪರ ಶ್ರೀ. **D.P.,** ವಕೀಲರಿಂದ:-

ಕೆಚ್ಚೇನಹಳ್ಳಿ ಗ್ರಾಮದಲ್ಲಿ ನನ್ನ ಮತ್ತು ನನ್ನ ಹೆಂಡತಿ ಗೌರಮ್ಮ ಅವರಿಗೆ ಸಂಬಂದಿಸಿದ ಹಾಗೆ ಗ್ರಾಮದಲ್ಲಿ 2 ಮನೆಗಳು ಇರುತ್ತವೆ . ಸದರಿ ಮನೆಗಳ ಖಾತೆ ನಂಬರ್ 37 ಮತ್ತು 54 ಇರುತ್ತದೆ . ಸದರಿ ಖಾತಾ ನಂಬರ್ 37 ಆಸ್ತಿಯು ನನ್ನ ಹೆಂಡತಿ ಗೌರಮ್ಮ ಅವರ ಹೆಸರಿನಲ್ಲಿ ಇರುತ್ತದೆ . ಸ ದರಿ ಆಸ್ತಿಯು ನನ್ನ ಹೆಂಡತಿಗೆ ದಾನವಾಗಿ ಅವರ ಅಜ್ಜರಾದ ಬಸಪ್ಪರವರಿಂದ ಬಂದಿರುತ್ತದೆ . ಸದರಿ ದಾನ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ . ಸದರಿ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 12 ½ ಘಜ , ಉತ್ತರ ದಕ್ಷಿಣ 18 ½ ಘಜ ಇರುತ್ತದೆ . ಸದರಿ ಅಸ್ತಿಯ ಮೂಲ ದಾಖಲೆಗಳಾದ ಸನ್ 1972 ರಿಂದ ಖಾನೀಶುಮಾರಿ ದಾಖಲೆಯನ್ನು ಗ್ರಾಮ ಪಂಚಾಯಯಿಂದ ಪಡೆದುಕೊಂಡು ಹಾಜರುಪಡಿಸಿರುತ್ತೇನೆ . ಈ ಹಿಂದೆ ಗ್ರಾಮ ಪಂಚಾಯತಿ ಇಲಾಖೆ ಅಧಿಕಾರಿಗಳು ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಒಬ್ಬರೇ ಇರುತ್ತಿದ್ದರು ಎಂದರೆ ಸರಿ. ಗ್ರಾಮದಲ್ಲಿ ಇರುವ ಹೌಸ್ ಲೀಸ್ಟ್ ಅನ್ನು ಕಂದಾಯ ಇಲಾಖೆಯವರು ತಯಾರಿಸಿತ್ತಿದ್ದರು ಎಂದರೆ ಸರಿ. ಅದನ್ನು ಹಾಜರುಪಡಿಸಿರುತ್ತಿರ ಎಂದರೆ ಸಾಕ್ಷಿ ಹೌಸ್ ಲೀಸ್ಟ್ ಎಕ್ಸಾಕ್ಟ್ರ ಅನ್ನು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ . ಡಿಸಿಬಿ ರಿಜಿಸ್ಟರ್ ಗಳು , ಕರಾಕರಣಿ ಮತ್ತು 11-ಇ ದಾಖಲೆಗಳೆಲ್ಲವು ಹಳೆಯ ಖಾನೀಶುಮಾರಿ ಮತ್ತು ಹೌಸ್ ಲೀಸ್ಟ್ ದಾಖಲೆಗಳ ಮೇಲೆ ತಯಾರಿಸಿರುತ್ತಾರೆ ಎಂದರೆ ಸರಿ. ನಾನು ಖಾತಾ ನಂಬರ್ 37 ರ ಆಸ್ತಿಗೆ ಸಂಬಂದಿಸಿದ ಯಾವುದೇ ಮೂಲ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಖಾತಾ ನಂಬರ್ 54 ರ ಮನೆಯೂ ಕೂಡ ನನ್ನ ಹೆಂಡತಿ ಗೌರಮ್ಮಅವರಿಗೆ ಅವರ ಅಜ್ಜ ಬಸಪ್ಪರವರಿಂದ ದಾನ ಬಂದಿರುತ್ತದೆ . ನನ್ನ ಹೆಂಡತಿ ಗೌರಮ್ಮ ಅವರ ಅಜ್ಜ ಬಸಪ್ಪರವರು ಅವರು ನನ್ನ ಹೆಂಡತಿಗೆ ಒಟ್ಟು 2 ಮನೆಗಳನ್ನು ದಾನವಾಗಿ ಕೋಟ್ಟಿರುತ್ತಾರೆ . ಈಗ ಸಾಕ್ಷಿಗೆ ನಿಡಿ 1 ರಿಂದ 15 ದಾಖಲೆಗಳನ್ನು ತೋರಿಸಿದ್ದು ಸದರಿ ದಾಖಲೆಗಳಲ್ಲಿ ಬಸಪ್ಪ ರವರು ಗೌರಮ್ಮ ಅವರಿಗೆ ನೀಡಿದ ದಾನಪತ್ರ ಬಗ್ಗೆ ನೋಡಿ ಇರುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ . ಅದರಂತೆ ನಾನು ನಿಡಿ 9

ದಾಖಲೆಯನ್ನು ಖಾನೀಶುಮಾರಿ ಖಾತಾ ನಂಬರ್ 37 ಆಸ್ತಿಗೆ ಸಂಬಂದಿಸಿದ್ದು ಇರುತ್ತದೆ . ನಿಡಿ 9 ದಾಖಲೆ ಡಿಸಿಬಿ ರಿಜಿಸ್ಟರ್ ಇರುತ್ತದೆ ಖಾನೀಶುಮಾರಿ ಇರುವುದಿಲ್ಲ ಎಂದರೆ ಸಾಕ್ಷಿ ನಿಡಿ 9 ಹೌಸ್ ಲೀಸ್ಟ್ ಇರುತ್ತದೆ ಎಂದು ಹೇಳುತ್ತಾರೆ . ಹೌಸ್ ಲೀಸ್ಟ್ ದಾಖಲೆ ಆಧಾರದ ಮೇಲೆಯೆ ಎಲ್ಲಾ ದಾಖಲೆಗಳನು ತಯಾರಿಸುತ್ತರೆ ಎಂದರೆ ಸಾಕ್ಷಿ ಪಂಚಾಯತಿವರಿಗೆ ಬಿಟ್ಟಿದ್ದು ಎಂದು ಹೇಳುತ್ತಾರೆ . ನನಗೆ ಎಲ್ಲಾ ವಿಚಾರ ಗೊತ್ತಿದ್ದರು ಸಹ ಮರೆ ಮಾಚಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಕೆಚ್ಚೇನಹಳ್ಳಿ ಗ್ರಾಮದ ಹೌಸ್ ಲೀಸ್ಟ್ ದಾಖಲೆಯನ್ನು ತೋರಿಸಿ ಅದರಲ್ಲಿ ಕ್ರಮ ಸಂಖ್ಯೆ 47, ಖಾತಾ ನಂಬರ್ 37 ಇರುವುದು ಸರ್ಕಾರಿ ಜಾಗ ಇರುವುದು ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ನಿಡಿ 9 ಚಾಲ್ತಿ ಹೌಸ್ ಲೀಸ್ಟ್ ಪ್ರಕಾರ ಖಾತೆ ಇರುತ್ತದೆ ಎಂದು ಹೇಳುತ್ತಾರೆ . ಕೆಚ್ಚೇನಹಳ್ಳಿ ಗ್ರಾಮದ ಹೌಸ್ ಲೀಸ್ಟ್ ರಂತೆ ಕ್ರಮ ಸಂಖ್ಯೆ 39 ಖಾತೆ ನಂಬರ್ 30 ರಲ್ಲಿ ನಮೂದಿರುವ ಬಸಪ್ಪರವರ ನನ್ನ ಹೆಂಡತಿ ಗೌರಮ್ಮ ಅವರ ಹೆಂಡತಿ ಇರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಪಂಚಾಯತಿ ಖಾತೆಗಳು ಮಾಡುವ ಸಂದರ್ಬದಲ್ಲಿ ಕೆಲವೊಮ್ಮೆ ಖಾತೆ ಬದಲಾವಣೆ ಆಗುತ್ತವೆ ಎಂದರೆ ಸರಿ. ಸದರಿ ಆಸ್ತಿಯು ನನ್ನ ಹೆಂಡತಿ ಗೌರಮ್ಮ ಅವರಿಗೆ ಅವರ ಅಜ್ಜ ಬಸಪ್ಪರವರು ನೀಡಿದ ದಾನದ ಪತ್ರದ ಆಸ್ತಿ ಇರುತ್ತದೆ ಎಂದರೆ ಸರಿ. ನಾವು ವಾಸವಿರುವ ಮನೆಯ ಪೂರ್ವ ಪಶ್ಚಿಮ 12 ½ ಘಜ , ಉತ್ತರ ದಕ್ಷಿಣ 18 ½ ಘಜ ಇರುತ್ತದೆ . ಕೆಚ್ಚೇನಹಳ್ಳಿ ಗ್ರಾಮದ ಹೌಸ್ ಲೀಸ್ಟ್ ಅಲ್ಲಿ ಕ್ರಮ ಸಂಖ್ಯೆ 39 ಮತ್ತು ಖಾತೆ ಸಂಖ್ಯೆ 30 ರಲ್ಲಿ ದಾವಾ ಆಸ್ತಿಯ ವಿಸ್ತೀರ್ಣ ನಮೂದು ಇರುವುದಿಲ್ಲ ಎಂದರೆ ಸರಿ. ನಿಡಿ 13 ಕಟ್ಟಡ ಪರವಾನಗೆಯು ಖಾತಾ ನಂಬರ್ 37 ರ ಆಸ್ತಿಗೆ ಪಡೆದುಕೊಂಡಿರುತ್ತೇನೆ . ನಾವು ಸದರಿ ಸದರಿ 37 ಖಾತಾ ನಂಬರ್ ಆಸ್ತಿಯಲ್ಲಿ ಪೂರ್ವ ಪಶ್ಚಿಮ 21 ಅಡಿ ಮತ್ತು ಉತ್ತರ ದಕ್ಷಿಣದಲ್ಲಿ 32 ಅಡಿ ವಿಸ್ತೀರ್ಣದಲ್ಲಿ ಹಳೆ ಮನೆ ಇರುತ್ತದೆ . ನಾನು ಉತ್ತರ ದಕ್ಷಿಣ ಜಾಗದಲ್ಲಿ 18 ½ ಜಾಗದಲ್ಲಿ ಸಂಪೂರ್ಣ ಮನೆ ನಿರ್ಮಾಣ ಮಾಡಿದ್ದು ದಕ್ಷಿಣ ದಿಕ್ಕಿಗೆ ಜಾಗ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಹಿಂದೆ ಮನೆ ಕಟ್ಟುವ ಸಂದರ್ಭದಲ್ಲಿ ಉಳಿದ ಜಾಗದಲ್ಲಿ ಕಿಟಕಿ ಆಗಲಿ ಮನೆ ನೀರು ಬೀಳಲು ಸೂರಾಗಲಿ ಜಾಗವನ್ನು ಬಿಡುತ್ತಿದ್ದರು ಎಂದರೆ ಸರಿ. ನನ್ನ ಹೆಂಡತಿ ಗೌರಮ್ಮ ರವರಿಗೆ ದಾನ ನೀಡುವ ಸಂರ್ಭದಲ್ಲಿ ಉತ್ತರ ದಕ್ಷಿಣ ದಿಕ್ಕಿಗೆ ಯಾವುದೇ ಜಾಗ

ಉಳೀದಿರುವುದಿಲ್ಲ ಸಂಪೂರ್ಣ ಸರ್ಕಾರಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆ ಪೂರ್ವ ದಿಕ್ಕಿಗೆ 20 ಅಡಿ ರಸ್ತೆ ಇದ್ದು , ಸದರಿ ರಸ್ತೆಯಲ್ಲಿ ವಾದಿ ಮತ್ತು ಊರಿನ ಗ್ರಾಮದವರು ಎಲ್ಲಾರ ಓಡಾಡಲು ಬಳಸುತ್ತಾರೆ ಎಂದರ ಸಾಕ್ಷಿ ದಾರಿ ಇರುತ್ತದೆ ಆದರೆ ಎಷ್ಟು ಅಡಿ ಎಂದು ಗೋತ್ತಿರುವುದಿಲ್ಲ ಎಂದು ಹೇಳುತ್ತಾರೆ . ನನಗೆ ಮೂಲ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಅದರಂತೆ ನ್ಯಾಯಾಲಯದ ಮೂಲಕ ನನ್ನ ಆಸ್ತಿ ಅಳತೆ ಮಾಡಿಸಿಕೊಳ್ಳಲು ತೊಂದರೆ ಇರುವುದಿಲ್ಲ .

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೇ ಸಮಯ ಕೋರಿದ್ದು ಆಲಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು, ಜಗಳೂರು